ಉಚ್ಚಾಗಾಂವ್ ಮತಕ್ಷೇತ್ರದ ಏತ ನೀರಾವರಿ ಯೋಜನೆಗಳು

467 - ಶ್ರೀ ಬಿ. ಐ. ಪಾಟೀಲ (ಉಚ್ಚಾಗಾಂವ್) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಉಚ್ಚಾಗಾಂವ್ ಮತಕ್ಷೇತ್ರದಲ್ಲಿ ಮಂಜೂರಾತಿ ಪಡೆದ ಏತ ನೀರಾವರಿ ಯೋಜನೆಗಳೆಷ್ಟು;

ಆ) ಇವುಗಳಲ್ಲಿ ಎಷ್ಟು ಯೋಜನೆಗಳನ್ನು ಪ್ರಾರಂಭಿಸಲಾಗಿದೆ. ಮತ್ತು ಎಷ್ಟು ಯೋಜನೆಗಳನ್ನು ಇನ್ನು ಪ್ರಾರಂಭಿಸಬೇಕಾಗಿದೆ;

ಇ) ಯೋಜನೆಗಳನ್ನು ತ್ವರಿತಗತಿಯಿಂದ ಪ್ರಾರಂಭಿಸಲು ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಂ.ಪಿ. ಕೇಶವಮೂರ್ತಿ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಯಾವುದು ಇಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) - ಸದರ -

ಬಚಾವತ್ ತೀರ್ಪಿನ ಪ್ರಕಾರ ಯೋಜನೆ ಕಾರ್ಯ

605 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಚಾವತ್ ತೀರ್ಪಿನ ಪ್ರಕಾರ ಕ್ರಿ.ಶ. 2000 ವರ್ಷಗಳಲ್ಲಿ ಕೃಷ್ಣಾಯೋಜನೆಯನ್ನು ಮುಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಆ) ಆಂಧ್ರ ಸರ್ಕಾರ ಕೈಗೊಂಡಿರುವ ತೆಲುಗು ಗಂಗಾ ಯೋಜನೆಯನ್ನು ಕರ್ನಾಟಕ ಸರ್ಕಾರ ವಿರೋಧಿಸಿದೆಯೇ.

ಶ್ರೀ ಎಸ್ ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು)

ಅ) ಪ್ರಸ್ತುತ ಜಾರಿಯಲ್ಲಿರುವ ಬಚಾವತ್ ತೀರ್ಪಿನ ಸ್ಕೀಮ್ 'ಎ' ಅನುಸಾರ ಕರ್ನಾಟಕಕ್ಕೆ ಕೃಷ್ಣಾ ಕೊಳ್ಳದ ಯೋಜನೆಗಳಿಗಾಗಿ 734 ಟಿಎಂಸಿ ಪ್ರಮಾಣದಷ್ಟು ನೀರು ಲಭ್ಯವಿದ್ದು, ದಿ:31-3-94ರ ವರೆಗೆ 482.45 ಟಿಎಂಸಿ ಪ್ರಮಾಣದಷ್ಟು ನೀರನ್ನು ಪ್ರಸ್ತುತ ಪೂರ್ಣಗೊಂಡಿರುವ ಹಾಗೂ ಭಾಗಶಃ ಕಾರ್ಯರೂಪದಲ್ಲಿರುವ ಯೋಜನೆಗಳ ಅಡಿ ಉಪಯೋಗಿಸಿಕೊಳ್ಳಬಹುದಾಗಿದೆ. 1977ರ ಒಪ್ಪಂದದ ಅನುಸಾರ ಮದ್ರಾಸ್ ನಗರದ ಕುಡಿಯುವ ನೀರಿನ ಪೂರೈಕೆಗಾಗಿ 5 ಟಿಎಂಸಿ ನೀರನ್ನು ಒದಗಿಸಬೇಕಾಗಿದ್ದು, ಬಾಕಿ ಉಳಿದ 246.55 ಟಿಎಂಸಿ ನೀರನ್ನು ಪ್ರಸ್ತುತ ನಿರ್ಮಾಣದ ವಿವಿಧ ಹಂತಗಳಲ್ಲಿರುವ ಹಾಗೂ ಇನ್ನೂ ಕೈಗೊಳ್ಳಬೇಕಾಗಿರುವ ಯೋಜನೆಗಳ ಅಡಿ ಉಪಯೋಗಿಸಿಕೊಳ್ಳಬೇಕಾಗಿದೆ. ಈ ಎಲ್ಲಾ ಯೋಜನೆಗಳನ್ನು ಕ್ರಿ.ಶ. 2000 ಇಸವಿಯೊಳಗೆ ಕಾರ್ಯಗತಗೊಳಿಸಿ ರಾಜ್ಯದ ಪಾಲಿನ ನೀರನ್ನು ಸಂಪೂರ್ಣವಾಗಿ ಬಳಸಿಕೊಳ್ಳಲು ಸಮಗ್ರಯೋಜನೆಯನ್ನು ತಯಾರಿಸಲಾಗಿದ್ದು, ಈ ಯೋಜನೆಯ ಅನುಸಾರ ವರ್ಷವಾರು ಆರ್ಥಿಕ ಮತ್ತು ಭೌತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಇದಲ್ಲದೆ, ಈ ವಿಚಾರದಲ್ಲಿ ತೊಡಗಿಸಬೇಕಾಗಿರುವ ಸಂಪನ್ಮೂಲವನ್ನು ಕ್ರೋಢೀಕರಿಸುವ ಸಲುವಾಗಿ ಪ್ರಸ್ತುತ ಕೃಷ್ಣಾ ಮೇಲ್ದಂಡೆ ಯೋಜನೆಗಾಗಿಯೇ ಕೃಷ್ಣಾ ಭಾಗ್ಯ ಜಲ ನಿಗಮವನ್ನು ಸ್ಥಾಪಿಸಲಾಗಿದ್ದು, ಕೃಷ್ಣಾ ಕೊಳ್ಳದ ಇತರ ಯೋಜನೆಗಳನ್ನು ಈ ನಿಗಮದ ವ್ಯಾಪ್ತಿಗೆ ಒಳಪಡಿಸುವ ಉದ್ದೇಶವಿದೆ.

ಆ) ಹೌದು.

ನೀರಾವರಿ ಯೋಜನೆಗಳಲ್ಲಿ ಗುತ್ತಿಗೆದಾರರ ಬಗ್ಗೆ

468 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಾವೇರಿ ಮತ್ತು ಹೇಮಾವತಿ ನೀರಾವರಿ ಯೋಜನೆಗಳಲ್ಲಿ ಹೊರ ರಾಜ್ಯಗಳಿಂದ ಬಂದಿರುವ ಗುತ್ತಿಗೆದಾರರ ಸಂಖ್ಯೆ ಎಷ್ಟು ?

ಆ) ಈ ರಾಜ್ಯದ ಗುತ್ತಿಗೆದಾರರಿಗೆ ಆದ್ಯತೆ ಕೊಡಲು ಸಾಧ್ಯವಿಲ್ಲವೆ

ಇ) ಕೊಡದಿರುವುದಕ್ಕೆ ಕಾರಣಗಳೇನು ?

ಶ್ರೀ ಎಸ್.ಎಂ.ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) ಈ ಪ್ರಶ್ನೆ ಉದ್ಭವಿಸುವುದಿಲ್ಲ. ಏಕೆಂದರೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ಗುತ್ತಿಗೆದಾರರು ನೊಂದಾಯಿಸಿದಲ್ಲಿ ಅಂತಹವರುಗಳಿಗೆ ಮಾತ್ರ ಕಾಮಗಾರಿಗಳನ್ನು ನೀಡಲಾಗುವುದು.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವಿತ ನೀರಾವರಿ ಯೋಜನೆ

469 - ಶ್ರೀ ಪಿ.ಜಿ.ಆರ್.ಸಿಂಧ್ಯ (ಕನಕಪುರ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ಮೂರು ವರ್ಷಗಳಲ್ಲಿ ವಿವಿಧ ನೀರಾವರಿ ಯೋಜನೆಗಳಿಂದ ಎಷ್ಟು ಅಚ್ಚುಕಟ್ಟು ಪ್ರದೇಶವನ್ನು ಹೊಸದಾಗಿ ನಿರ್ಮಿಸಲಾಗಿದೆ.

ಆ) ಕಾವೇರಿ ಮತ್ತು ಕೃಷ್ಣ ಯೋಜನೆಗಳಿಗೆ ಬಿಡುಗಡೆಯಾಗಿರುವ ಹಣ ಎಷ್ಟು

ಇ) ಕಾಮಗಾರಿಗಳಾಗಿದ್ದು ಹಣ ಬಿಡುಗಡೆಯಾಗಬೇಕಾಗಿರುವ (ಬಾಕಿ ಇರುವ) ಬಿಲ್ಲುಗಳ ಮೊತ್ತವೆಷ್ಟು ?

ಶ್ರೀ ಎಸ್.ಎಂ.ಕೃಷ್ಣ (ಉಪ ಮುಖ್ಯಮಂತ್ರಿಗಳು) :

ಸಾಲು	ಭಾರಿ ಮಧ್ಯಮ ನೀರಾವರಿ	ಹಾಗೂ ಸಣ್ಣ ನೀರಾವರಿ	ಒಟ್ಟು
	(ಹೆಕ್ಟೇರ್ ಗಳಲ್ಲಿ)		
1991-92	42492	4653	47145
1992-93	44044	6096	50140
1993-94	69985	5092	75077

ಸಾಲು	ಕಾವೇರಿ ಕೊಳ್ಳದ ಯೋಜನೆಗಳು	ಕೃಷ್ಣ ಕೊಳ್ಳದ ಯೋಜನೆಗಳು
	ಖರ್ಚಾಗಿರುವ ಹಣ (ಕೋಟಿ ರೂ.ಗಳಲ್ಲಿ)	
1991-92	144.34	203.25
1992-93	216.73	282.79
1993-94	240.95	424.44

ಇ) 146.36 ಕೋಟಿ ರೂ.ಗಳು (1-8-1994 ರಂದು ಇದ್ದಂತೆ)